ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 5, November - December 2024, Pp. 119-123
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಕರ್ನಾಟಕದಲ್ಲಿ ವ್ಯಾಸಕೂಟ ಮತ್ತು ದಾಸಕೂಟ

**ಕರ್ಣ ಎಸ್[1] ಮತ್ತು ಪ್ರೊ. ಸರ್ವಮಂಗಳ ಜಿ[2]**
[1]ಸಂಶೋಧನಾ ವಿದ್ಯಾರ್ಥಿ, [2]ಪ್ರಾಧ್ಯಾಪಕರು,
ಸ್ನಾತಕೋತ್ತರ ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ಅಧ್ಯಯನ ಹಾಗೂ ಸಂಶೋಧನಾ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ

**Abstract:**
*ವೈವಿಧ್ಯಮಯವಾದ ಭಾರತವು ವಿವಿಧ ಧರ್ಮಗಳ ಆಶ್ರಯತಾಣವಾಗಿದೆ. ಭಾರತ ಒಂದು ಧಾರ್ಮಿಕ ಮಹಾಸಾಗರವಾಗಿದೆ. ಈ ಸಾಗರಕ್ಕೆ ಭಾರತದ ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ ಭಾಗಗಳಿಂದ ಬೇರೆ ಬೇರೆ ಕಾಲಗಳಲ್ಲಿ ಧಾರ್ಮಿಕ ವಿವೇಚನೆಯ ಪ್ರವಾಹಗಳು ಹರಿದು ಬಂದು ಸೇರಿವೆ.1 ಭಾರತದಲ್ಲೇ ಹುಟ್ಟಿದ ವಿವಿಧ ಧರ್ಮಗಳಲ್ಲಿ ವೈಷ್ಣವ ಧರ್ಮವೂ ಸಹ ಒಂದಾಗಿದೆ. ಈ ವೈಷ್ಣವ ಧರ್ಮದ ಆರಂಭವನ್ನು ವಿಷ್ಣುವಿನ ಆರಾಧನೆಯಿಂದ ಗುರುತಿಸಲಾಗುತದ್ತೆ. ವೇದಗಳ ಕಾಲದಲ್ಲಿ ವಿಷ್ಣುವಿಗೆ ಹೆಚ್ಚಿನ ಪ್ರಾಧ್ಯಾನ್ಯತೆ ಇಲ್ಲದಿದ್ದರೂ ವಾಮನನ ರೂಪದಲ್ಲಿ ತನ್ನ ಮೂರು ಹೆಜ್ಜೆಗಳಿಂದ ಸಮಸ್ತ ಲೋಕವನ್ನು ಅಳೆದುದರ ಕುರಿತು ಋಗ್ವೇದದಲ್ಲಿ ಉಲ್ಲೇಖಿತವಾಗಿದೆ.2 ಈ ವಿಷಯದಿಂದಾಗಿ ವಿಷ್ಣುವಿಗೆ ಭಾರತದ ಧಾರ್ಮಿಕ ಪರಂಪರೆಯಲ್ಲಿ ಮಹತ್ವದ ಸ್ಥಾನವನ್ನು ನೀಡಲಾಗಿದೆ. ಪ್ರಸ್ತುತ ಲೇಖನದಲ್ಲಿ ಕರ್ನಾಟಕದ ವ್ಯಾಸಕೂಟ ಮತ್ತು ದಾಸಕೂಟ ಕುರಿತು ವಿಶ್ಲೇಷಿಸಲಾಗಿದೆ.*

**Keywords:** *ಕರ್ನಾಟಕ ಇತಿಹಾಸ, ಧಾರ್ಮಿಕ ನಂಬಿಕೆ, ವ್ಯಾಸಕೂಟ, ದಾಸಕೂಟ, ವೈಷ್ಣವ ಪರಂಪರೆ.*

## ಪೀಠಿಕೆ

ವೈಷ್ಣವ ಪಂಥ ಕುರಿತು ಮೌರ್ಯರು ಹಾಗೂ ಗುಪ್ತರ ಆಳ್ವಿಕೆಯ ಕಾಲದಲ್ಲಿ ಮಾಹಿತಿ ದೊರೆಯುತ್ತದೆ. ಬೇಲೂರು ಕೇಶವದಾಸರು ತಮ್ಮ ಕೃತಿ 'ಶ್ರೀ ಕರ್ಣಾಟಕ ಭಕ್ತ ವಿಜಯ'ದಲ್ಲಿ ಮೌರ್ಯರ ಕಾಲದ ಭಾಗವತ ಧರ್ಮದ ಸ್ಥಿತಿ–ಗತಿಯನ್ನೂ ಹಾಗೂ ಕೀರ್ತನಕಾರರನ್ನೂ ಗುರ್ತಿಸಿದ್ದಾರೆ. ಗುಪ್ತರ ಕಾಲದಲ್ಲಿ ವೈಷ್ಣವ ಪಂಥವು ರಾಜಧರ್ಮವಾಗಿ ಮಾನ್ಯತೆ ಪಡೆದು ಭಾರತದಾದ್ಯಂತ ಪ್ರಚಾರವಾಯಿತು. ಕರ್ನಾಟಕದಲ್ಲೂ ಈ ಧರ್ಮದ ಪಾಚೀನ ಇತಿಹಾಸವನ್ನು ಗುರುತಿಸಬಹುದು. ಕನ್ನಡದ ಪ್ರಪ್ರಥಮ ಶಾಸನವಾದ ಹಲ್ಮಿಡಿ ಶಾಸನವು ವಿಷ್ಣು ಸ್ತುತಿಯೊಂದಿಗೆ ಆರಂಭವಾಗಿದೆ.[3] ಇದು ಕರ್ನಾಟಕದ ಪ್ರಮುಖ ರಾಜಮನೆತನಗಳು ವೈಷ್ಣವ ಧರ್ಮವನ್ನು ಪೂಜನೀಯ ಭಾವನೆಯಿಂದ ನೋಡುತ್ತಿದ್ದರು ಹಾಗೂ ಕರ್ನಾಟಕದಲ್ಲಿ ವೈಷ್ಣವ ಧರ್ಮವು ರಾಜ–ಮಹಾರಾಜರ ಪೋಷಣೆ ಪಡೆದಿತ್ತು. ಅದಕ್ಕೆ ಪ್ರಮುಖ ಆಧಾರಗಳಾಗಿ ವೈಷ್ಣವ ದೇವಾಲಯಗಳಿಗೆ ನೀಡಿದ ದಾನಗಳ ಕುರಿತ ಮಾಹಿತಿಗಳು ಶಾಸನಗಳಲ್ಲಿ ಕಂಡುಬರುತ್ತವೆ.

**Please cite this article as:** ಕರ್ಣ ಎಸ್. ಮತ್ತು ಸರ್ವಮಂಗಳ ಜಿ.. (2024). ಕರ್ನಾಟಕದಲ್ಲಿ ವ್ಯಾಸಕೂಟ ಮತ್ತು ದಾಸಕೂಟ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 3(5), 119–123

ದಾಸಕೂಟ ಎಂಬ ಪದಕ್ಕೆ ಡಾ.ಎನ್.ಎನ್. ಚಿಕ್ಕಮಾದುರವರು ತಮ್ಮ ಕೃತಿಯಲ್ಲಿ ದಾಸ ಎಂದರೆ ಸೇವಕನೆಂದೂ, ಕೂಟವೆಂದರೆ ಗುಂಪು–ಸಂಗಮ–ಸಮೂಹ ಎಂದೂ ಕಿಟ್ಟಲ್ ಕೋಶದಲ್ಲಿ ಅರ್ಥವಿದೆ. 'ದಾಸಕೂಟ' ಎಂಬ ಪದವು ಅರಿಸಮಾಸದ ಪದವಾಗಿದೆ. ದಾಸ ಮತ್ತು ಕೂಟ ಸಂಸ್ಕೃತ ಪದವಾಗಿದ್ದು, ಇಲ್ಲಿ ದಾಸ ಎಂದರೆ ಸೇವಕ ಎಂದರ್ಥ. ನಾನು ಭಗವಂತನ ಸೇವಕ ಎಂಬ ಭಾವವುಳ್ಳವರೇ 'ದಾಸ'[4] ಎಂದು ವಿವರಿಸಿದ್ದಾರೆ. ಈ ಹಿನ್ನೆಲೆಯಲ್ಲಿ ದಾಸ ಪಂಥವೆಂದರೆ ವೈಷ್ಣವ ಧರ್ಮವನ್ನು ದೀಕ್ಷೆಯಾಗಿ ಪಡೆದು, ಆ ಧರ್ಮದ ತತ್ವಗಳನ್ನು ಪ್ರಸಾರ ಮಾಡಿದ ಒಂದು ಸಮೂಹವೆಂದು ಅರ್ಥೈಸಬಹುದಾಗಿದೆ.

ವೈಷ್ಣವ ಸಂಪ್ರದಾಯದಲ್ಲಿ ದಾಸಪಂಥಕ್ಕೆ ಉನ್ನತ ಸ್ಥಾನವಿದೆ. ಕರ್ನಾಟಕದಲ್ಲಿ ದಾಸ ಪಂಥದ ಮೂಲದಲ್ಲಿ ಹರಿದಾಸ ಎಂಬ ಪದದ ಬಳಕೆ ಕಂಡುಬರುತ್ತದೆ. ದಾಸ ಪದದ ಅರ್ಥ 'ಸೇವಕ, ಶೂದ್ರ, ಭಕ್ತ, ಭಕ್ತಾನುದಾಸ, ಸೇವಕನಸೇವಕ'[5] ಎಂಬ ಅರ್ಥಗಳಿವೆ. '´ಸಾಂಖ್ಯ, ಯೋಗ, ಚಾರ್ವಾಕ, ಬೌದ್ಧ ಈ ದರ್ಶಗಳನ್ನು ದೀಕ್ಷೆಯ ಮೂಲಕ ಪಡೆದು, ಸದಸ್ಯರಾಗಿ ಸಂಘಟಿತವಾಗುವ ಗುಂಪುಗಳೇ ಮೂರ್ತ ರೂಪದಲ್ಲಿ ಆಚರಣೆ ಮಾಡುವ ಪಂಥವಾಗಿವೆ.'[6] ಇಲ್ಲಿ ದಾಸ ಎಂಬ ಪದವು ಹರಿದಾಸರಿಗೆ ಸಂಬಂದಿಸಿದ್ದಾಗಿದೆ. ದಾಸಕೂಟ ಎಂಬ ಪದಕ್ಕೆ 'ಹರಿದಾಸರ ಪಂಥ, ದಾಸ ಪಂಥ'[7] ಎಂಬ ಅರ್ಥವಿದೆ. ದಾಸರ ಆರಾಧ್ಯ ದೈವ ವಿಷ್ಣು. ಆತನನ್ನು ಶ್ರೀಹರಿ ಎಂತಲೂ ಕರೆಯುತ್ತಾರೆ. ವಿಷ್ಣು ಪಾರಮ್ಯವನ್ನು ದಾಸರು ಪ್ರಚಾರ ಮಾಡಿದ್ದರಿಂದ 'ಹರಿದಾಸರು'ಎಂದು ಪ್ರಸಿದ್ಧರಾದರು. ವಚನ ಸಾಹಿತ್ಯ ಹರ ಪಾರಮ್ಯವನ್ನು ಬೋಧಿಸಿದರೆ ದಾಸ ಸಾಹಿತ್ಯ ಹರಿ ಪಾರಮ್ಯವನ್ನು ಬೋಧಿಸುತ್ತದೆ.[8] ಹಾಗಾಗಿ ದಾಸರುಗಳು ಹರಿ ಅಥವಾ ವಿಷ್ಣುವನ್ನು ತಮ್ಮ ಹಾಡು, ಕೀರ್ತನೆಗಳ ಮೂಲಕ ಜನ ಸಾಮಾನ್ಯರಿಗೆ ಭಕ್ತಿ ರೂಪದಲ್ಲಿ ಪ್ರಚಾರಮಾಡಿದರು. ಅವು ಜನ ಸಾಮಾನ್ಯರನ್ನು ತಲುಪಿದ್ದು ಮಾತ್ರವಲ್ಲದೇ ಸಾಹಿತ್ಯ, ಸಂಗೀತ ಕ್ಷೇತ್ರಕ್ಕೆ ನೀಡಿದ ಮಹತ್ವದ ಕೊಡುಗೆಗಳಾಗಿ ಉಳಿದುಕೊಂಡವು.

**ವ್ಯಾಸ ಕೂಟ**

ವ್ಯಾಸಕೂಟ ಮತ್ತು ದಾಸಕೂಟ ಎಂಬ ಎರಡು ಬಣಗಳನ್ನು ಕರ್ನಾಟಕದ ಹರಿದಾಸರಲ್ಲಿ ಕಾಣಬಹುದು. ಹರಿದಾಸ ಪರಂಪರೆಯಲ್ಲಿ ವ್ಯಾಸಕೂಟ ಮತ್ತು ದಾಸಕೂಟ ಎಂಬ ಪರಿಭಾಷೆ ಬಳಕೆ ಇರುವುದನ್ನು ಗಮನಿಸಬಹುದು. ವ್ಯಾಸಕೂಟದಲ್ಲಿನ ವ್ಯಾಸ ಎಂದರೆ ಶ್ರೀವೇದವ್ಯಾಸರಾದ ಬಾದರಾಯಣರು. ಇದು ಭಾಷೆಗೆ ಸಂಬಂಧಿಸಿದ ಪಂಥ ಭೇದವಾಗಿದೆ. ಗ್ರಂಥಸ್ಥ ಭಾಷೆಯಾಗಿದ್ದ ಸಂಸ್ಕೃತವು ಜನಸಾಮಾನ್ಯರಿಗೆ ಸುಲಭವಾದ ಭಾಷೆಯಾಗಿರಲಿಲ್ಲ. ಈ ಭಾಷೆಯು ವೇದಪಾರಂಗತರಿಗೆ ಸುಲಭವಾದ ಭಾಷೆಯಾಗಿತ್ತು. ಕನ್ನಡ ಭಾಷೆಯು ಜನಸಾಮಾನ್ಯರ ಆಡು ಭಾಷೆಯಾಗಿತ್ತು.

ಈ ಭಾಷಾ ಪಂಡಿತರುಗಳು ಎರಡು ಬಣಗಳಾಗಿ ಬೆಳೆದರು. 'ಪುರಂದರ ಸಾಹಿತ್ಯ ರಚನೆಯ ಕಾಲಕ್ಕೆ ಹರಿದಾಸ ಚಳುವಳಿಯು ವ್ಯಾಸರಾಯರ ಕಾಲದಲ್ಲಿ ವ್ಯಾಸಕೂಟ ಮತ್ತು ದಾಸಕೂಟ ಎನ್ನುವ ಎರಡು ಬಣಗಳಾಯಿತೆಂದು ಚರಿತ್ರೆ ತಿಳಿಸುತ್ತದೆ.[9] ಹರಿದಾಸ ಪಂಥದ ದಾಸರುಗಳಲ್ಲಿ ಪ್ರಮುಖರಾದ ವ್ಯಾಸರಾಯರ ಸನ್ನಿಧಿಯಲಿದ್ದ ಒಂದು ವಿದ್ವಾಂಸ ವರ್ಗ ಸಂಸ್ಕೃತ ಪಾಂಡಿತ್ಯವುಳ್ಳವರಾಗಿದ್ದರು. ಶಾಸ್ತ್ರವೇತ್ತರು, ವೇದ ಉಪನಿಷತ್, ಬ್ರಹ್ಮಸೂತ್ರಗಳನ್ನು ವ್ಯಾಸಂಗ ಮಾಡಿದ್ದವರು. ಮಾಧ್ವ ವೇದಾಂತದ ತತ್ವಸಾಧನೆಯಲ್ಲಿಯೂ ಉಪಾಂಗಗಳಾದ ಎಲ್ಲ ವಿದ್ಯೆಗಳಲ್ಲಿಯೂ ನಿಷ್ಣಾತರಾಗಿದ್ದರು. ಯೋಗ್ಯತೆ – ಯಲ್ಲಾಗಲಿ, ಪದವಿಯಲ್ಲಾಗಲೀ, ಹರಿದಾಸರಿಗೆ ಅವರೊಡನೆ ಸಮಾನ ಪದವಿ ಬರುವುದಕ್ಕೆ ಸ್ವಲ್ಪಕಾಲ ಹಿಡಿಯಿತು. ಆ ವಿದ್ವಾಂಸರ ಗುಂಪಿಗೆ

ವ್ಯಾಸಕೂಟವೆಂದೂ ಇವರಿಗೆ ದಾಸಕೂಟವೆಂತಲೂ ಹೆಸರಾಯಿತು.[10]

ಪುರಂದರ ದಾಸರ ಕಾಲಕ್ಕೆ ಈ ಪರಿಭಾಷೆಯೂ ಬಳಕೆಗೆ ಬಂದದ್ದು ಎಂದು ವಿದ್ವಾಂಸರ ಅಭಿಪ್ರಾಯ. ಅಂದರೆ "ವ್ಯಾಸಕೃತವಾದ ಸಾಹಿತ್ಯ ಶಾಸ್ತ್ರಗಳನ್ನು ಬಲ್ಲವರು ವ್ಯಾಸಕೂಟವೆಂತಲೂ", "ಪುರಂದರ ದಾಸ ಮೊದಲಾದ ದಾಸಾರ್ಯರು ಸಾಹಿತ್ಯಜ್ಞರು ದಾಸಕೂಟವೆಂತಲೂ" ಪ್ರಸಿದ್ಧಿಯಾಗಿತ್ತು.[11] ಅಂದರೆ ಅವರ ಪಾಂಡಿತ್ಯದ ಆಧಾರದ ಮೇಲೆ ಒಂದು ವೃಂದವನ್ನು ವ್ಯಾಸಕೂಟ ಎಂಬ ಹೆಸರಿನಿಂದ ಬಳಕೆಗೆ ತಂದರು. ವ್ಯಾಸಕೂಟದವರು ಮಧ್ವಾಚಾರ್ಯರ ಗ್ರಂಥಗಳನ್ನು ಅಭ್ಯಸಿಸುತ್ತಿದ್ದು ಅವರ ಸಿದ್ಧಾಂತ ಪ್ರತಿಪಾದಿಸುತ್ತಿದ್ದರು. ಮೂಲ ಸಂಸ್ಕೃತ ಗ್ರಂಥಗಳನ್ನು ಟೀಕೆ, ಟಿಪ್ಪಣಿಗಳನ್ನು ವ್ಯಾಸಂಗ ಮಾಡಿ ಖಂಡನ ಮಂಡನೆಗಳಿಂದ ದಿಗ್ವಿಜಯಕ್ಕೆ ಹೊರಡುವ ಪಂಡಿತ, ಪ್ರಕಾಂಡರು ಅವರ ಅನುಯಾಯಿಗಳು 'ವ್ಯಾಸಕೂಟರೆನಿಸಿದರು' ಅದರ ಸಾರಭೂತವಾದ ತತ್ವಾಮೃತವನ್ನು ಸಂಗೀತ ಸಾಹಿತ್ಯದ ಮೂಲಕವಾಗಿ ಪರಿಣಾಮಕಾರಿಯಾಗಿ ಬೋಧಿಸಿದವರು ದಾಸಕೂಟದವರೆನಿಸಿದರು.[12] ಹಾಗಾಗಿ ವ್ಯಾಸಕೂಟವು ಸಂಪೂರ್ಣವಾಗಿ ಮಧ್ವಾಚಾರ್ಯರ ತತ್ವ ಪ್ರಚಾರಗೊಳಿಸುವ ತನ್ನದೇ ಆದ ತಾತ್ತ್ವಿಕ ಪರಿಕಲ್ಪನೆಯನ್ನು ಹೊಂದಿತ್ತು. ಈ ವ್ಯಾಸಕೂಟದಲ್ಲಿ ಮಧ್ವರ ವಿಚಾರಧಾರೆ ಅನುಸರಿಸಿದವರಲ್ಲಿ ಪ್ರಮುಖರೆಂದರೆ ವ್ಯಾಸತೀರ್ಥರು, ವಾದಿರಾಜರು, ಶ್ರೀವಿಜಯಿಂದ್ರ ತೀರ್ಥರು ಶ್ರೀರಾಘವೇಂದ್ರ ತೀರ್ಥರು–ಮೊದಲಾದವರು. ಶ್ರೀ ಮಧ್ವಾಚಾರ್ಯರೇ ಆನಂದತೀರ್ಥ ಎಂಬ ಅಂಕಿತದಿಂದ ದ್ವಾದಶಸ್ತೋತ್ರ ಬರೆದು ಹರಿದಾಸ ಸಾಹಿತ್ಯಕ್ಕೆ ನಾಂದಿ ಹಾಡಿದರು.[13]

**ದಾಸಕೂಟ**

ಆಡಂಬರಕ್ಕಿಂತ ಭಕ್ತಿ, ಪ್ರೀತಿಯ ಪೂಜೆಯ ಮೂಲಕ ಹರಿಯನ್ನು ಕಾಣಲು ಸಾಧ್ಯ ಎಂದು ತೋರಿಸಿಕೊಟ್ಟವರು ದಾಸಕೂಟದವರು. ದಾಸರು ಅಚ್ಚ ಕನ್ನಡಿಗರು. ಇವರು ಸಂಸ್ಕೃತ ಪಂಡಿತರಾಗಿದ್ದರೂ ಕನ್ನಡ ಸಾಹಿತ್ಯದಲ್ಲಿ ರಚನಾಕಾರ್ಯ ಕೈಗೊಂಡಿದ್ದವರಾಗಿದ್ದರು. ಹರಿದಾಸರು ಕನ್ನಡನಾಡಿಗೆ ಭಾಷೆ, ಭಾವ ಶ್ರೀಮಂತಿಕೆಯನ್ನು ತಂದುಕೊಟ್ಟವರಾಗಿದ್ದಾರೆ. ಹರಿದಾಸ ಸಂಸ್ಕೃತಿ, ಹರಿದಾಸ ಸಾಹಿತ್ಯ ಎನ್ನುವುದು ಕನ್ನಡ ನಾಡಿಗೇ ವಿಶಿಷ್ಟವಾದ ಪರಂಪರೆಯಾಗಿದೆ.[14] ದಾಸಪದಗಳು ಕೇವಲ ದೇವರನ್ನು ಸ್ಮರಿಸುವ ಉದ್ದೇಶ ಹೊಂದಿದೆ ಮತ್ತು ಸಮಾಜದ ಅಂಕುಡೊಂಕುಗಳನ್ನು ತಿದ್ದಲು ದಾಸಕೂಟದವರು ಮಾರ್ಗದರ್ಶಕರಾಗಿದ್ದಾರೆ. ತಪ್ಪುಗಳನ್ನು ತಪ್ಪದೆ ಖಂಡಿಸಿ ಪಾಪತ್ಮರನ್ನು ಪುನೀತಗೊಳಿಸಲು ಬಂದವರೇ ಈ ಹರಿದಾಸರು. ಅಂತ್ಯಜರೆನಿಸಿದವರನ್ನು ಹರಿಜನರೆಂದು ಕರೆದವರು ಈ ಹರಿದಾಸರಾಗಿದ್ದಾರೆ.[15]

ಹರಿದಾಸ ಎಂದರೆ ಹರಿಯನ್ನು ಬಿಟ್ಟು ಉಳಿದ ಜೀವಿಗಳೆಲ್ಲರೂ ಶ್ರೀಹರಿಯ ದಾಸರು ಎಂಬ ಅರ್ಥ ಒಂದಡೆಯಾದರೆ, ವಿಶಾಲರ್ಥದಲ್ಲಿ ಶ್ರೀಹರಿಯ ಭಕ್ತರೆಲ್ಲರೂ ಹರಿದಾಸರು ಎನ್ನಬಹುದು. 'ದಾಸಕೂಟ' ಎಂಬ ಎಂಬ ಪದವನ್ನ ಮೊದಲು ಬಳಸಿದವರು ಯಾರು? ಯಾರು ಮೊದಲು ಸೃಷ್ಟಿಸಿದರು? ಉಲ್ಲೇಖಿಸಿದರು? ಕೀರ್ತನೆಗಳಲ್ಲಿ ಪ್ರಯೋಗಿಸಿದವರ್ಯಾರು? ಅವರ ಪ್ರಾಚೀನತೆಯೇನು ಎಂಬ ವಿಚಾರದ ಕುರಿತು ಯಾವುದೇ ವಿದ್ವಾಂಸರು ಇದೂವರೆಗೂ ಹೇಳಿರುವುದಿಲ್ಲ.[16]

ಈ ಕೀರ್ತನಕಾರರಲ್ಲಿ ಮೊದಲಿಗರು ಯಾರೆಂಬ ವಿಷಯದ ಕುರಿತು ತಿಳಿಯಲು ಹೊರಟಾಗ ರಾಮ ಭಕ್ತನಾದ ಹನುಮಂತನು ಕೀರ್ತನಕಾರರಲ್ಲಿ ಮೊದಲಿಗನಾಗಿದ್ದಾನೆ ಎಂಬ ಅಂಶ ತಿಳಿದುಬರುತ್ತೆದೆ. ಇದಕ್ಕೆ ರಾಮಾಯಣವು ಆಧಾರವಾಗಿದೆ. 'ದಾಸಕೂಟ'ಪದದ ಪ್ರಯೋಗವನ್ನು ಗಮನಿಸಿದರೆ ಕರ್ನಾಟಕದಲ್ಲಿ ಹರಿದಾಸ ಸಾಹಿತ್ಯ ತನ್ನ ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ, ಅಂದರೆ ಸಾ.ಶ. 15–16ನೇ ಶತಮಾನಗಳಲ್ಲಿ ಸೃಷ್ಟಿಯಾಗಿ ಬಳಕೆಗೆ

ಬಂದಿರಬಹುದಾಗಿದೆ. ಭಾಗೋಜಿ ಪಿ.ಕೆ ಅವರು ತಮ್ಮ ದಾಸ ಸಾಹಿತ್ಯ ದ್ವಿತೀಯ ಘಟ್ಟ ಎಂಬ ಕೃತಿಯಲ್ಲಿ ಪುರಂದರ ದಾಸರು ದಾಸಕೂಟವೆಂಬ ಪರಂಪರೆಗೆ ಮೊದಲಿಗರಾಗಿದ್ದಾರೆ. ವ್ಯಾಸಕೂಟವೆಂಬ ಹೆಸರೇ ಸೂಚಿಸುವಂತೆ ಶ್ರೀ ವ್ಯಾಸರೇ ವ್ಯಾಸಕೂಟದ ಸಂಸ್ಥಾಪಕರಾಗಿದ್ದಾರೆ.[17] ಹಾಗಾಗಿ ದಾಸ ಎಂದರೆ ಸೇವಕ ಎಂತಲೂ, ಕೂಟ ಎಂದರೆ ಪಂಥ ಎಂತಲೂ, ದಾಸಕೂಟವೆಂದರೆ ಒಂದೇ ಉದ್ದೇಶ, ಮನೋಭಾವವುಳ್ಳ ಅನೇಕ ಸದಸ್ಯರ ಗುಂಪು ಎಂದು ಅರ್ಥೈಸಬಹುದು. ಶಿವಶರಣರು ಕನ್ನಡನಾಡಿನಲ್ಲಿ ಕನ್ನಡದ ಮೂಲಕ ಧಾರ್ಮಿಕ ಕ್ರಾಂತಿ ಉಂಟುಮಾಡುವಂತೆ ದಾಸಕೂಟದವರೂ ಸಮಾಜದಲ್ಲಿ ಸಂಚಲನ ಉಂಟುಮಾಡಿದವರಾಗಿದ್ದಾರೆ.

**ಕೊನೆಟಿಪ್ಪಣಿಗಳು**


1. ದೇಜಗೌ. (ಸಂ.) (2010). *ಜಿ.ಹನುಮಂತರಾವ್ ಅವರ ಆಯ್ದ ಲೇಖನಗಳು.* ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ. ಪುಟ 1.
2. Bhandarkar R.G. (1995). *Vaishnavism, Shaivism and Minor Religious System.* Asian Educational Service, Pp 47.
3. ಚಿದಾನಂದ ಮೂರ್ತಿ ಎಂ. (1996). *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ.* (5ನೇ ಮುದ್ರಣ) ಸಪ್ನ ಬುಕ್ ಹೌಸ್. ಪುಟ 182–183.
4. ಚಿಕ್ಕಮಾದು ಎನ್.ಎನ್, (2011). *ವಚನಸಾಹಿತ್ಯ ಮತ್ತು ದಾಸ ಸಾಹಿತ್ಯಗಳ ಸಮೀಕ್ಷೆ.* ಪ್ರಸಾರಾಂಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ. ಪುಟ 181.
5. ಶಿವರಾಮಕಾರಂತ (ಸಂ.) (1958). *ಸಿರಿಗನ್ನಡ ಅರ್ಥಕೋಶ.* ಹರ್ಷ ಮುದ್ರಾಣಾಲಯ. ಪುಟ 253.
6. ರಹಮತ್ ತರೀಕೆರೆ. (2009). *ಕರ್ನಾಟಕದ ನಾಥಪಂಥ.* (ದ್ವಿತೀಯ ಮುದ್ರಣ), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಪುಟ 3–4
7. ನಾಯಕ ಹಾ.ಮಾ. (ಪ್ರ.ಸಂ). (2011). *ಕನ್ನಡ ರತ್ನಕೋಶ* (8ನೇ ಮುದ್ರಣ). ಕನ್ನಡ ಸಾಹಿತ್ಯ ಪರಿಷತ್ತು. ಪುಟ 135.
8. ಇಲ್ಲೂರು ಜಯರಾಮಪ್ಪ. (1981). *ದಾಸಸಾಹಿತ್ಯ ಹಾಗೂ ಸಾಮಾಜಿಕ ಮೌಲ್ಯಗಳು.* ಕರ್ನಾಟಕ ವಿಶ್ವವಿದ್ಯಾಲಯ. ಪುಟ 2.
9. ತಾರಿಣಿ ಶುಭದಾಯಿನಿ, ಆರ್. (2010). ಸಮಾಜ. *ಗ್ರಂಥ:* ಅಮರೇಶ ನುಗಡೋಣಿ (ಸಂ.) *ಪುರಂದರ ಸಾಹಿತ್ಯ ಅಧ್ಯಯನ.* ಪ್ರಸಾರಾಂಗ, ಹಂಪಿ ವಿಶ್ವವಿದ್ಯಾಲಯವ. ಪುಟ 36.
10. ಸೀತಾರಾಮಯ್ಯ, ವಿ. *ಸಮಗ್ರ ಸಾಹಿತ್ಯ ಮಾಲೆ–20, ವಿ.ಸೀ.ಸಂಪದ,* ಬೆಂಗಳೂರು, ಪುಟ 119.
11. ಮಂಜುನಾಥ್, ಸಿ.ಯು. (2012). *ಶಾಸನಗಳು ಮತ್ತು ಕರ್ನಾಟಕ ಸಂಸ್ಕೃತಿ.* ಚಿತ್ಕಲಾ ಪ್ರಕಾಶನ. ಪುಟ 120.
12. ಹೊನ್ನುಸಿದ್ದಾರ್ಥ ಸಿ.ಬಿ. (ಪ್ರ.ಸಂ.) ಚಿತ್ತಯ್ಯಪೂಜಾರ್ ಡಿ.ಕೆ. (ಸಂ.). *ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಸಂಪುಟ–4, ಭಾಗ–2,* ಪೂರ್ವೋಕ್ತ, ಕೃಷ್ಣರಾವ್ ಕೆ.ಎಂ. ಅವರ ಲೇಖನ, ಹರಿದಾಸ ಸಾಹಿತ್ಯದ ಹಿನ್ನೆಲೆ ಮತ್ತು ಉಗಮ, ಪುಟ 5.
13. ಇಂದುಬಾಯಿ ಟಿ.ಕೆ. (2004). ದಾಸಕೂಟ ಮತ್ತು ವ್ಯಾಸಕೂಟ. *ಗ್ರಂಥ:* ಕೃಷ್ಣಸ್ವಾಮಿ ಅಯ್ಯಂಗಾರ್, ಎಚ್.ಎಸ್. (ಸಂ.). *ದಾಸ ಸಾಹಿತ್ಯ ದರ್ಶನ.* ಮಂಗಳ ಭಾರತಿ ಪ್ರಕಾಶನ. ಪುಟ 63.
14. ಅನಸೂಯದೇವಿ. (2012). *ವ್ಯಾಸಕೂಟ ಮತ್ತು ದಾಸಕೂಟ.* ಸೃಷ್ಠಿ ಪ್ರಕಾಶನ. ಪುಟ 173.

15. ಬೇಲೂರು ಕೇಶವದಾಸರು. (2005). *ಶ್ರೀಹರಿದಾಸ ಸಾಹಿತ್ಯ.* (3ನೇ ಮುದ್ರಣ). ಭಾರತೀ ಪ್ರಕಾಶನ, ಪುಟ 185–186.
16. ಇಂದುಬಾಯಿ ಟಿ.ಕೆ. (2004). ಪೂರ್ವೋಕ್ತ, ಪುಟ 65.
17. ಭಾಗೋಜಿ, ಪಿ.ಕೆ. *ದಾಸ ಸಾಹಿತ್ಯದ ದ್ವಿತೀಯ ಘಟ್ಟ* ಸಂಪುಟ–3, ಕರ್ನಾಟಕ ವಿಶ್ವವಿದ್ಯಾನಿಲಯ. ಪುಟ 6.

**ಪರಾಮರ್ಶನ/ಆಕರ ಗ್ರಂಥಗಳು**

- ಅಮರೇಶ ನುಗಡೋಣಿ (ಸಂ.). (2010). *ಪುರಂದರ ಸಾಹಿತ್ಯ ಅಧ್ಯಯನ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ.
- ಇಲ್ಲೂರು ಜಯರಾಮಪ್ಪ. (1981). *ದಾಸಸಾಹಿತ್ಯ ಹಾಗೂ ಸಾಮಾಜಿಕ ಮೌಲ್ಯಗಳು.* ಕರ್ನಾಟಕ ವಿಶ್ವವಿದ್ಯಾಲಯ.
- ಕೃಷ್ಣಸ್ವಾಮಿ ಅಯ್ಯಂಗಾರ್, ಎಚ್.ಎಸ್ (ಸಂ), (2004). *ದಾಸ ಸಾಹಿತ್ಯ ದರ್ಶನ.* ಮಂಗಳ ಭಾರತಿ ಪ್ರಕಾಶನ.
- ಚಿಕ್ಕಮಾದು, ಎನ್.ಎನ್. (2011). *ವಚನ ಸಾಹಿತ್ಯ ಮತ್ತು ದಾಸ ಸಾಹಿತ್ಯಗಳ ಸಮೀಕ್ಷೆ.* ಪ್ರಸಾರಾಂಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ.
- ಚಿದಾನಂದಮೂರ್ತಿ, ಎಂ. (2011). *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ.* ಸಪ್ನಬುಕ್ ಹೌಸ್,
- ದೇಜಗೌ. (ಸಂ.) (2010). *ಜಿ.ಹನುಂತರಾವ್ ಅವರ ಆಯ್ದ ಲೇಖನಗಳು.* ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.
- ಭಾಗೋಜಿ,ಪಿ.ಕೆ. *ದಾಸ ಸಾಹಿತ್ಯದ ದ್ವಿತೀಯ ಘಟ್ಟ.* ಸಂಪುಟ–3 ಕರ್ನಾಟಕ ವಿಶ್ವವಿದ್ಯಾನಿಲಯ
- ರಹಮತ್ ತರೀಕೆರೆ. (2008). *ಸಾಂಸ್ಕೃತಿಕ ಅಧ್ಯಯನ.* ಕರ್ನಾಟಕ ಸಾಹಿತ್ಯ ಅಕಾಡೆಮಿ.
- ಹೊನ್ನುಸಿದ್ದಾರ್ಥ, ಸಿ.ಬಿ. (ಪ್ರ.ಸಂ.), (2014). *ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಸಂಪುಟ–4, ಭಾಗ–2.* ಕನ್ನಡ ಅಧ್ಯಯನ ಸಂಸ್ಥೆ, ಬೆಂಗಳೂರು ವಿಶ್ವವಿದ್ಯಾನಿಲಯ
- Bhandarkar R.G. (1995). *Vaishnavism, Shaivism and Minor Religious System.* Asian Educational Service, Pp 47.